| | | | | | | | |
|---|---|---|---|---|---|---|---|
| | ನಗರ | | | | | | |
| 9 | ಚಿಕ್ಕಬಳ್ಳಾಪುರ | 1 | 1 | – | – | – | 2 |
| 10 | ಚಿಕ್ಕಮಗಳೂರು | – | – | – | – | – | – |
| 11 | ಚಿತ್ರದುರ್ಗ | – | – | 2 | – | – | 2 |
| 12 | ದಕ್ಷಿಣಕನ್ನಡ | 1 | – | – | 1 | – | – |
| 13 | ದಾವಣಗೆರೆ | – | – | 1 | – | – | 1 |
| 14 | ಧಾರವಾಡ | – | – | – | – | – | – |
| 15 | ಗದಗ | – | – | – | – | – | – |
| 16 | ಗುಲ್ಬರ್ಗಾ | 1 | – | 3 | 1 | – | 3 |
| 17 | ಹಾಸನ | – | – | 2 | – | – | – |
| 18 | ಹಾವೇರಿ | – | – | – | – | – | – |
| 19 | ಕೊಡಗು | – | 2 | – | – | 2 | – |
| 20 | ಕೋಲಾರ | – | – | 6 | – | – | – |
| 21 | ಕೊಪ್ಪಳ | – | – | – | – | – | – |
| 22 | ಮಂಡ್ಯ | – | 1 | 1 | – | 1 | 1 |
| 23 | ಮೈಸೂರು | – | – | – | – | – | – |
| 24 | ರಾಯಚೂರು | – | – | – | – | – | – |
| 25 | ರಾಮನಗರ | – | – | – | – | – | – |
| 26 | ಶಿವಮೊಗ್ಗ | – | 2 | – | – | 2 | – |
| 27 | ತುಮಕೂರು | 1 | 8 | – | 1 | 8 | – |
| 28 | ಉಡುಪಿ | 8 | 4 | 1 | 8 | 1 | 1 |
| 29 | ಉತ್ತರಕನ್ನಡ | – | – | – | – | – | – |
| | ಒಟ್ಟು | *17* | *23* | *22* | *11* | *14* | *17* |

**978 ಶ್ರೀ ಓಲೇಕಾರ ನೆಹರೂ ಚನ್ನಬಸಪ್ಪ (ಹಾವೇರಿ) :** ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕು, ಹಾವನೂರು ಹರಿಜನ ಕೇರಿಯ ನೂರು ಕುಟುಂಬಗಳು ಬಹಳ ಹಿಂದಿನಿಂದಲೂ ತುಂಗಭದ್ರಾ ನದಿಯಲ್ಲಿಯ ಮರಳು ತುಂಬಿ ಜೀವನ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜೀವನಕ್ಕೆ ಉದ್ಯೋಗವನ್ನು ಅವಲಂಬಿಸಿರುವ ಇವರಿಗೆ ಪರವಾನಗಿ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಒಕ್ಕಲು ಎಬ್ಬಿಸದಂತೆ ಇವರಿಗೆ ಪರವಾನಗಿ ನೀಡಿ ಜೀವನ ನಡೆಸಲನಿವರಿಗೆ ಸಹಾಯ ಮಾಡಲು ಸರ್ಕಾರ ಮುಂದಾಗುವುದೇ?

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :**

ಅ) ಹೌದು.

ಆ) ಹಾವನೂರು ಗ್ರಾಮ ವ್ಯಾಪ್ತಿಯಲ್ಲಿ ಸಾಮಾನ್ಯ ಮರಳು ಗಣಿಗಾರಿಕೆಗಾಗಿ ಶ್ರೀ ಪಿ.ಜಿ. ದಾಸಕೇರಿ ಎಂಬುವವರಿಗೆ ದಿ: 15-01-98 ರಿಂದ

5 ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರಾಗಿದ್ದು, ಸದರಿ ಪ್ರದೇಶದಲ್ಲಿ ಹರಿಜನ ಕೇರಿಯ ಕುಟುಂಬದವರು ಮರಳು ತುಂಬಿ ಜೀವನ ಸಾಗಿಸುತ್ತಿದ್ದರು. ದಿ: 16-10-2000ದ ಆದೇಶ ಸಂಖ್ಯೆ :ಸಿಐ 02 ಎಂಎಂಎನ್ 98(1) ರಂತೆ ಮರಳು ಗುತ್ತಿಗೆಯನ್ನು ಹರಾಜು ಮೂಲಕ ನೀಡಲು ಸರ್ಕಾರವು ನಿರ್ಧರಿಸಿದ್ದರಿಂದ, ಸದರಿ ಗುತ್ತಿಗೆಯನ್ನು ನವೀಕರಿಸಿರುವುದಿಲ್ಲ.

ಸ್ಥಳೀಯ ಮಾದಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಪರಸಪ್ಪ ದಾಸನಕೇರಿ ಇವರು ಹಾವನೂರು ಗ್ರಾಮ ವ್ಯಾಪ್ತಿಯಲ್ಲಿ ಎರಕದ ಮರಳಿನ ಗಣಿಗುತ್ತಿಗೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಪರಿಶೀಲಿಸಲಾಗುತ್ತಿದೆ.

ಶ್ರೀ ಜ್ಯೋತಿಮೃತ್ಯುಂಜಯ, ಹೊಳಲು, ಇವರು ತುಂಗಭದ್ರಾ ನದಿ ಪಾತ್ರದಲ್ಲಿ 6,000 ಎಕರೆ ಪ್ರದೇಶದ ಗಣಿಗುತ್ತಿಗೆಗಾಗಿ ಅರ್ಜಿ ಸಲ್ಲಿಸಿದ್ದು, ಹಾವನೂರು ಗ್ರಾಮವೂ ಸಹ ಈ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ W.P.No- 49376/04 ರಲ್ಲಿ ದಿ: 22-06-07 ರಲ್ಲಿನ ತೀರ್ಪಿನಂತೆ ಇವರ ಅರ್ಜಿಯನ್ನು ಇತ್ಯರ್ಥಗೊಳಿಸಿದ ನಂತರ ಶ್ರೀ ಪರಸಪ್ಪ ದಾಸನಕೇರಿ ಇವರ ಎರಕದ ಮರಳಿನ ಗಣಿಗುತ್ತಿಗೆ ಅರ್ಜಿಯ ಕುರಿತು ಕ್ರಮಕೈಗೊಳ್ಳಲಾಗುವುದು. ಆನಂತರ, ಉಳಿದ ಪ್ರದೇಶದಲ್ಲಿ ಸಾಧಾರಣ ಮರಳು ಗುತ್ತಿಗೆ ಹರಾಜು ಮಾಡುವ ಬಗ್ಗೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಇ) ಶ್ರೀ ಜ್ಯೋತಿಮೃತ್ಯುಂಜಯ ಮತ್ತು ಶ್ರೀ ಪರಸಪ್ಪ ದಾಸನಕೇರಿ ಇವರ ಅರ್ಜಿಗಳು ಇತ್ಯರ್ಥವಾದ ನಂತರ ಉಳಿದ ಸಾಧಾರಣ ಮರಳು ಪ್ರದೇಶಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇ ಮಾಡಲಾಗುವುದು.

**647 ಶ್ರೀ ಪುಟ್ಟರಂಗಶೆಟ್ಟಿ.ಸಿ.** : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಗೆ ಸರ್ಕಾರ ಮಂಜೂರಾತಿ ನೀಡಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಇದಕ್ಕೆ ಬಿಡುಗಡೆಯಾದ ಹಣವೆಷ್ಟು;

ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?